**Women's Day**

| | |
|---|---|
| **Name of Activity** | **WOMENS DAY** |
| **Date** | **08/03/2022** |
| **Invited Guests** | Mrs. Grace Hemalatha, Assistant Professor, Dept of MBA, SIET, Tumkur |
| **Venue** | MBA Seminar Hall |
| **Faculty Coordinator** | Mrs. AmtulNaseeb |
| **Participated by** | Faculty members and Students |
| **Report in Detail** | "Womens Day was celebrated on 08/03/2022. The invited guest is Mrs Grace Hemalatha who spoke about the women have contributes greatly to country's development. 45 female faculty and 60 students attended the programme. |



# ದೇಶದ ಪ್ರಗತಿಗೆ ಮಹಿಳೆಯರ ಕೊಡುಗೆ ಅಪಾರ: ಪ್ರೊ. ಗ್ರೇಸ್ ಹೇಮಲತಾ




ತುಮಕೂರು: ದೇಶದ ಪ್ರಗತಿ ಮತ್ತು ಏಳಿಗೆಗೆ ಮಹಿಳೆಯರ ಕೊಡುಗೆ ಅಪಾರ ಹಾಗೂ ಕುಟುಂಬ ನಿರ್ವಹಣೆಯಲ್ಲಿ ಪ್ರಮುಖವಾದ ಪಾತ್ರ ವಹಿಸಿದ ಮಹಿಳೆ ತಮ್ಮ ಮಕ್ಕಳಿಗೆ ಉತ್ತಮವಾದ ಭವಿಷ್ಯವನ್ನು ರೂಪಿಸಬಲ್ಲರು, ಮಹಿಳೆಯನ್ನು ಯಾವುದೇ ಕಾರಣಕ್ಕೂ ತಾತ್ಸಾರ ಮನೋಭಾವದಲ್ಲಿ ಕಾಣುತ್ತಿದ್ದ ಸಮಾಜದಲ್ಲಿ ಸಾಧಿಸುವ ಚೈತ್ಯನ್ಯವಾಗಿ ಮಹಿಳೆ ಸಂಘಟನೆಯಾಗಿ ಆರ್ಥಿಕವಾಗಿ ಮತ್ತು ಸದೃಢತೆಯಿಂದ ಮುನ್ನಡೆಯುತ್ತಿದ್ದಾರೆ. ಹಾಗೂ ಎಲ್ಲಾ ವಿಷಯಗಳಲ್ಲೂ ಪುರುಷಗಿಂತ ಒಂದು ಕೈ ಮೇಲು ಎಂದು ಶ್ರೀದೇವಿ ಎಂ.ಬಿ.ಎ. ವಿಭಾಗದ ಪ್ರೊ।ಗ್ರೇಸ್ ಹೇಮಲತಾ ತಿಳಿಸಿದರು.

ನಗರದ ಶಿರಾರಸ್ತೆಯ ಶ್ರೀದೇವಿ ಎಂ.ಬಿ.ಎ. ವಿಭಾಗದ ವತಿಯಿಂದ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಕಾಲೇಜಿನ ಆವರಣದಲ್ಲಿ ಆಚರಿಸಲಾಯಿತು.

ಪ್ರೊ. ಅಮುತಲ್ ನಸೀಭ್ ಮಾತನಾಡುತ್ತಾ ಪುರುಷ ಯಾವುದೇ ಸಾಧನೆ ಮಾಡಬೇಕಾದರೆ ಅಲ್ಲಿ ಒಬ್ಬ ಮಹಿಳೆಯ ಅಸ್ತಿತ್ವ ಅಗತ್ಯ, ಮಹಿಳೆ ಇಲ್ಲದಿದ್ದರೆ ಪುರುಷನ ಜೀವನ ಶೂನ್ಯ ಆದಿಕಾಲದಿಂದಲೂ ಸಹ ಮಹಿಳೆಯರು ಪುರುಷರಿಗೆ ಎಲ್ಲಾ ಕೆಲಸ ಕಾರ್ಯಗಳಲ್ಲೂ ಸಹಕಾರವನ್ನು ನೀಡುತ್ತಲೇ ಬಂದಿದ್ದಾರೆ, ಸ್ತ್ರೀ ಜೊತೆಗಿಲ್ಲದಿದ್ದರೆ ಪುರುಷ ಸಾಧಿಸುವುದು ಬಹಳ ಕಷ್ಟ ಇಡೀ ಸಂಸಾರದ ಹೊಣೆಯನ್ನು ಹೊತ್ತ ಮಹಿಳೆ ಸಂಸಾರವನ್ನು ಯಾವುದೇ ರೀತಿಯಾದ ಕಷ್ಟವಿಲ್ಲದೆ ನಡೆಸುತ್ತಾಳೆ ಎಂದು ಅರ್ಥಪೂರ್ಣವಾಗಿ ವಿವರಿಸಿದರು.

ಕಾರ್ಯಕ್ರಮದಲ್ಲಿ ಶ್ರೀದೇವಿ ಎಂ.ಬಿ.ಎ. ವಿಭಾಗದ ಮುಖ್ಯಸ್ಥರಾದ ಡಾ.ಕೆ.ಎಸ್. ರಾಮಕೃಷ್ಣ, ಪ್ರೊ.ಬಿ.ಎನ್.ಪ್ರತಾಪ್, ಪ್ರೊ।ಗ್ರೇಸ್ ಹೇಮಲತಾ, ಪ್ರೊ। ಅಮುತಲ್ ನಸೀಭ್, ಶ್ರೀಚರಣ್ ಇದ್ದರು.